ದಿನಾಂಕ 09-06-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಆರ್.ಸಿ.ಎಸ್., ವಕೀಲರಿಂದಃ-

ನನ್ನ ಮದುವೆಯಾಗಿ 36 ವರ್ಷಗಳಾಗಿವೆ. ನನ್ನ ಅತ್ತೆ, ಮಾವರವರ ಕುಟುಂಬಕ್ಕೆ ನನ್ನ ಗಂಡನೇ ಹಿರಿಯ ಮಗ ಎಂದರೆ ಸರಿ. ನನ್ನ ಗಂಡ ತೀರಿಕೊಂಡು 16 ವರ್ಷಗಳಾಗಿವೆ. ಅವರು ತೀರಿಕೊಳ್ಳುವ ಕಾಲಕ್ಕೆ ಅವರಿಗೆ 45 ವರ್ಷ ವಯಸ್ಸಾಗಿತ್ತು. ನಿಮ್ಮ ಪತಿಗೆ ಸರ್ವೇ ನಂ.26/ಪಿ3 ರಲ್ಲಿ ಒಟ್ಟು ಕುಟುಂಬದಲ್ಲಿದ್ದಾಗ 3 ಎಕರೆ ಜಮೀನು ಮಂಜೂರಾಗಿತ್ತು ಎಂದರೆ ಸಾಕ್ಷಿಯು ನಾವು ಬೇರೆ ಇದ್ದಾಗ ಪ್ರತ್ಯೇಕವಾಗಿ ಮಂಜೂರು ಮಾಡಿಸಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಈ ಬಗ್ಗೆ ವಾದಪತ್ರದಲ್ಲಿ ಹೇಳಿದ್ದೇವೆ. ಸದರಿ ಆಸ್ತಿಯನ್ನು ಯಾಮಿನಿಯವರಿಗೆ ಮಾರಾಟ ಮಾಡಿದ್ದೇವೆ ಎಂದರೆ ಸರಿ. ನನಗೆ ಈಗ ತೋರಿಸಲಾದ ದಾಖಲೆ ಸದರಿ ಮಾರಾಟದ ಕ್ರಯಪತ್ರ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರ ಆಧಾರದ ಮೇಲೆ ಯಾಮಿನಿಯವರಿಗೆ ಖಾತೆ ಆಗಬಾರದೆಂದು ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ನನಗೆ ಈಗ ತೋರಿಸಲಾದ ದಾಖಲೆ ಸದರಿ ತಕರಾರಿನ ಪ್ರತಿ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ಆಸ್ತಿಯನ್ನು ಯಾಮಿನಿಯವರು ನಿರಂಜನ್.ಜಿ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಮೇಲೆ ಹೇಳಿದ ಆಸ್ತಿಯ ಮಾರಾಟದ ಹಣದಿಂದ ಬಿಡದಿಯ ಕೇತಗಾನಹಳ್ಳಿ ಗ್ರಾಮದಲ್ಲಿ ಒಂದು ನಿವೇಶನವನ್ನು ನನ್ನ ಪತಿಯವರ ಹೆಸರಿಗೆ ಕೊಂಡುಕೊಂಡೆವು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸಾಲ ಮಾಡಿದ್ದೆವು, ಮಾರಾಟ ಮಾಡಿ ಸಾಲ ತೀರಿಸಿ ಉಳಿದ ಹಣದಲ್ಲಿ

ಕೊಂಡುಕೊಂಡೆವು ಎಂದು ನುಡಿಯುತ್ತಾರೆ. ಸದರಿ ನಿವೇಶನದ ಖಾತೆ ನನ್ನ ಪತಿಯ ಮರಣಾ ನಂತರ ನನ್ನ ಹೆಸರಿಗೆ ಆಗಿದೆ ಎಂದರೆ ಸರಿ. ನನಗೆ ಈಗ ತೋರಿಸಲಾದ ದಾಖಲೆಗಳು ಸದರಿ ನಿವೇಶನದ ಡಿಮ್ಯಾಂಡ್ ರಿಜಿಸ್ಟರ್‌ನ ಪ್ರತಿಗಳು ಎಂದರೆ ಸರಿ. ಅವುಗಳನ್ನು ಕ್ರಮವಾಗಿ **ನಿಡಿ-3 ಮತ್ತು ನಿಡಿ-4** ಎಂದು ಗುರುತಿಸಲಾಯಿತು.

2. ವಾಜರಹಳ್ಳಿಯಲ್ಲಿ ನಿಮ್ಮ ಪತಿಯ ಹೆಸರಿನಲ್ಲಿ ಮನೆ ಇದೆ ಎಂದರೆ ಸಾಕ್ಷಿಯು ಆ ಸೈಟನ್ನು ನನ್ನ ಪತಿ ಕೊಂಡುಕೊಂಡದ್ದು ಅದರಲ್ಲಿ ಮನೆ ಕಟ್ಟಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಮನೆಯ ಖಾತೆ ನನ್ನ ಪತಿಯ ಹೆಸರಿನಿಂದ ನನ್ನ ಹೆಸರಿಗೆ ಆಗಿದೆ ಎಂದರೆ ಸರಿ. ಈಗ ತೋರಿಸಲಾದ ದಾಖಲೆ ಸದರಿ ಮನೆಯ ಡಿಮ್ಯಾಂಡ್ ರಿಜಿಸ್ಟರ್‌ನ ಪ್ರತಿ ಎಂದರೆ ಸರಿ. ಅದನ್ನು ನಿಡಿ-5 ಎಂದು ಗುರುತಿಸಲಾಯಿತು. ನನ್ನ ಪತಿಯ ಹೆಸರಿಗೆ 3 ಎಕರೆ ಜಮೀನು ಮಂಜೂರಾದ ಕಾಲಕ್ಕೆ ನಾವೆಲ್ಲಾ ಒಟ್ಟಿಗೆ ಇದ್ದೆವು ಎಂದರೆ ಸರಿಯಲ್ಲ. ನಾನು ಮದುವೆಯಾದ ಒಂದು ವರ್ಷಕ್ಕೆ ಪ್ರತ್ಯೇಕವಾಗಿ ಹೋದೆವು. ನಮ್ಮ ಹೆಸರಿಗೆ ಮಂಜೂರಾದ ಆಸ್ತಿಯನ್ನು ನಮ್ಮ ಭಾಗಕ್ಕೆ ಪಡೆದುಕೊಂಡು ಪ್ರತ್ಯೇಕವಾಗಿ ಹೋದೆವು ಎಂದರೆ ಸರಿಯಲ್ಲ. ಮಂಜೂರಾದ 3 ಎಕರೆ ಆಸ್ತಿಯನ್ನು ನನ್ನ ಗಂಡನ ಭಾಗಕ್ಕೆ ಪಡೆದುಕೊಂಡು ನಾವು ಪ್ರತ್ಯೇಕವಾಗಿ ಹೋದೆವು ಎಂದರೆ ಸರಿಯಲ್ಲ. ಸದರಿ ಆಸ್ತಿ ನನ್ನ ಪತಿಯ ಹೆಸರಿಗೆ ಒಟ್ಟು ಕುಟುಂಬದ ಪರವಾಗಿ ಹಿರಿಯ ಮಗನಾಗಿದ್ದರಿಂದ ಮಂಜೂರಾಗಿತ್ತು ಎಂದರೆ ಸರಿಯಲ್ಲ.

3. ದಾವಾ ಸ್ವತ್ತುಗಳಿಗೂ, ನನ್ನ ಪತಿಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಪತಿ ಅವರ ಜೀವಿತ

ಕಾಲದಲ್ಲಿ ಭಾಗಾಂಶ ಕೇಳಿ ದಾವೆ ಸಲ್ಲಿಸಿರಲಿಲ್ಲ. 3 ಎಕರೆ ನನ್ನ ಪತಿಯ ಭಾಗಕ್ಕೆ ಪಡೆದುಕೊಂಡಿದ್ದು ಆ ಕಾರಣದಿಂದಲೇ ನನ್ನ ಪತಿ ಅವರ ಜೀವಿತ ಕಾಲದಲ್ಲಿ ಭಾಗಕ್ಕಾಗಿ ಯಾವುದೇ ದಾವೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದ ಪ್ಯಾರಾ 9 ರಲ್ಲಿ 3 ಎಕರೆ ಆಸ್ತಿ ನನ್ನ ಪತಿಗೆ ಪ್ರತ್ಯೇಕವಾಗಿ ಮಂಜೂರಾಗಿತ್ತು ಎಂದು ಹೇಳಿರುವುದನ್ನು ವಾದಪತ್ರದಲ್ಲಿ ಬರೆಸಿದ್ದೇನೆ. ನಾನು ವಾದಪತ್ರದಲ್ಲಿ ಆ ರೀತಿ ಬರೆಸಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. ನಿಡಿ-3 ರಿಂದ ನಿಡಿ-5 ದಾಖಲೆಗಳಲ್ಲಿರುವ ಆಸ್ತಿಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ, ಏಕೆಂದರೆ ಅವು ಸ್ವಯಾರ್ಜಿತ ಸ್ವತ್ತುಗಳು. ನಿಡಿ-2 ತಕರಾರು ಅರ್ಜಿಯನ್ನು ಆ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ಸಲ್ಲಿಸಿದ್ದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ನನಗಾಗಲೀ, ನನ್ನ ಪತಿಗಾಗಲೀ ಯಾವುದೇ ಭಾಗಾಂಶದ ಹಕ್ಕಿಲ್ಲ ಎಂದರೆ ಸರಿಯಲ್ಲ. ಭೂಸ್ವಾಧೀನಗೊಂಡ ಸ್ವತ್ತುಗಳ ಪರಿಹಾರದ ಹಣ ಪಡೆದುಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಖಾತೆ ನಿಮ್ಮ ಮೈದುನರವರ ಹೆಸರಿಗೆ ಆಗಿರುವುದನ್ನು ಇದುವರೆಗೂ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ನನ್ನ ಮಾವನ ಮರಣಾ ನಂತರ ನನ್ನ ಅತ್ತೆಯ ಹೆಸರಿಗೆ ಆಗಿದೆ ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂ.3 ರ ಪಹಣಿ ಸರ್ಕಾರದ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ. ದಾವಾ ಐಟಂ ನಂ.5 ಮತ್ತು 6 ರ ಸಂಬಂಧ ಗಂಗಮ್ಮನ ವಿರುದ್ಧ ಸಿಂಗ್ರಯ್ಯರವರು ಕೇಸು ಹಾಕಿದ್ದರು ಎಂದರೆ ಗೊತ್ತಿಲ್ಲ. ಸದರಿ ಆಸ್ತಿಗಳಲ್ಲಿ ನಮಗೆ ಹಕ್ಕಿಲ್ಲದ ಕಾರಣ ಆ ದಾವೆಯಲ್ಲಿ ನಮ್ಮನ್ನು

ಪಕ್ಷಗಾರರಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

**(ಲೋಕೇಶ)**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.